ಅವರು ಕೂಡ ಒಬ್ಬರಾಗಿದ್ದರು ಎಂದು ಎಲ್ಲರಿಗೂ ಕೂಡ ಗೊತ್ತಿದೆ. ಹಾಗಾಗಿ ಇವತ್ತು ಕರ್ನಾಟಕ ವಿಧಾನಮಂಡಲದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರಾಗಿ ಚುನಾಯಿತ ಪ್ರತಿನಿಧಿಗಳಾಗಿ ತಮ್ಮ ಸೇವೆಯನ್ನು ಸಲ್ಲಿಸಿದಂತಹ ಗಾಂಧಿವಾದಿಗಳಾಧಂತಹ ಹಾಗೂ ಸಮಾಜದಲ್ಲಿ ತಮ್ಮದೇ ಆದಂತಹ ರೀತಿಯಲ್ಲಿ ತಮ್ಮ ಸೇವೆಯ ಮುಖಾಂತರ ಚಿರಪರಿಚಿತರಾದಂತಹ ಅನೇಕರು ಸದಸ್ಯರ ಅಗಲಿಕೆಯಿಂದ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ ಎನ್ನುವಂತಹ ಮಾತನ್ನು ಹೇಳಿ ಇವತ್ತು ನಾನು ಕೂಡ ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿ ಭಾಗಿಯಾಗಿ ಅಗಲಿದ ಈ ಮುಖಂಡರುಗಳಿಗೆ ನನ್ನ ಶ್ರದ್ಧಾಂಜಲಿಯನ್ನು ಈ ಸಂದರ್ಭದಲ್ಲಿ ನಾನು ಅರ್ಪಿಸುತ್ತೇನೆ.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

12–30 PM

2. <u>ಪ್ರಕಟಣೆ</u>

ವಿಷಯ: ಶ್ರೀ ಸಿ.ಪಿ ಯೋಗೀಶ್ವರ, ವಿಧಾನಸಭೆಯ ಶಾಸಕರು, ವಿಧಾನಸಭೆ ಹಾಗೂ ಮತ್ತಿತರ ಶಾಸಕರು ಸಲ್ಲಿಸಿರುವ ರಾಜಿನಾಮೆಯನ್ನು ಅಂಗೀಕರಿಸಿರುವ ಬಗ್ಗೆ.

– – –

ಸಭಾಧ್ಯಕ್ಷರು: 13ನೇ ವಿಧಾನಸಭೆಗೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಸಂಖ್ಯೆ: 185 ರಿಂದ ಚುನಾಯಿತರಾಗಿದ್ದ ಶ್ರೀ ಸಿ.ಪಿ.ಯೋಗೀಶ್ವರ್ ಅವರ ರಾಜೀನಾಮೆಯನ್ನು ದಿನಾಂಕ 31.3.2009 ರಂದು, ಗೋವಿಂದರಾಜ ನಗರದ ವಿಧಾನಸಭಾ ಕ್ಷೇತ್ರ ಸಂಖ್ಯೆ: 166 ರಿಂದ ಚುನಾಯಿತರಾಗಿದ್ದ ಶ್ರೀ ವಿ.ಸೋಮಣ್ಣನವರ ರಾಜಿನಾಮೆಯನ್ನು ದಿನಾಂಕ 4.4.2009 ರಂದು, ರಾಮನಗರದ ವಿಧಾನಸಭಾ ಕ್ಷೇತ್ರ ಸಂಖ್ಯೆ:183 ರಿಂದ ಚುನಾಯಿತರಾಗಿದ್ದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ರಾಜಿನಾಮೆಯನ್ನು ದಿನಾಂಕ 28.05.2009 ರಂದು ಚಿತ್ತಾಪುರ್ ವಿಧಾನಸಭಾ ಕ್ಷೇತ್ರ ಸಂಖ್ಯೆ:40 ರಿಂದ ಚುನಾಯಿತರಾಗಿದ್ದ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರ ರಾಜೀನಾಮೆಯನ್ನು ದಿನಾಂಕ 28.05.2009ರಂದು ಹಾಗೂ ಕೊಳ್ಳೆಗಾಲ ವಿಧಾನಸಭೆ ಕ್ಷೇತ್ರ ಸಂಖ್ಯೆ: 222 ರಿಂದ ಚುನಾಯಿತರಾಗಿದ್ದ ಶ್ರೀ ಆರ್.ಧ್ರುವನಾರಾಯಣ್‌ರವರ ರಾಜೀನಾಮೆಯನ್ನು ದಿನಾಂಕ 30.05.2009 ರಂದು ಅಂಗೀಕರಿಸಲಾಗಿದೆಯೆಂದು ಸದನಕ್ಕೆ ತಿಳಿಸಬಯಸುತ್ತೇನೆ.